ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ಸಂಖ್ಯೆ:ಬೆನವಿ/01/ಶೈಕ್ಷಣಿಕ/ಸ್ಕೌಟ್ಸ್ ಗೈಡ್ಸ್/360 /2020-21 ದಿನಾಂಕ: 19-10-2020

ಗೆ,
ಪ್ರಾಂಶುಪಾಲರು,
ಬೆಂಗಳೂರು ನಗರ ವಿಶ್ವವಿದ್ಯಾಲನಿಯದ
ಎಲ್ಲಾ ಸಂಯೋಜಿತ ಕಾಲೇಜುಗಳು,
ಬೆಂಗಳೂರು.

ಮಾನ್ಯರೆ,

ವಿಷಯ: ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ರೋವರ್-ರೇಂಜರ್ ಘಟಕವನ್ನು ತೆರೆಯುವ ಬಗ್ಗೆ.
ಉಲ್ಲೇಖ: 1. ರಾಜ್ಯ ಮುಖ್ಯ ಆಯುಕ್ತರು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಅವರಿಂದ ಬಂದಂತಹ ಪತ್ರ ಸಂಖ್ಯೆ: ಬಿಎಸ್‌ಜಿ:ಎಸ್‌ಹೆಚ್‌ಕ್ಯೂ: 534: 2020-21 ದಿನಾಂಕ 02-09-2020.
2. ಕುಲಪತಿಗಳ ಆದೇಶದ ದಿನಾಂಕ: 07-10-2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ರಾಜ್ಯ ಮುಖ್ಯ ಆಯುಕ್ತರು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಅವರು ತಮ್ಮ ಪತ್ರದಲ್ಲಿ ಕರ್ನಾಟಕ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ರೋವರ್-ರೇಂಜರ್ ಘಟಕವನ್ನು ತೆರೆದು ಯುವಕರಲ್ಲಿ ದೇಶಭಕ್ತಿ, ಕೌಶಲ್ಯಗಳ ತರಬೇತಿ, ಮಾನವೀಯ ಮೌಲ್ಯ ಮತ್ತು ಜೀವನ ಶಿಕ್ಷಣ ನೀಡುವ ಮತ್ತು ವಿವಿಧ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಸ್ಕೌಟ್-ಗೈಡ್ ಸಂಸ್ಥೆಗೆ ತಾವು ಸಂಪೂರ್ಣ ಸಹಕಾರ ನೀಡಬೇಕಾಗಿ ಮತ್ತು ಎಲ್ಲಾ ಕಾಲೇಜುಗಳಲ್ಲಿ ಘಟಕ ಪ್ರಾರಂಭಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿರುತ್ತಾರೆ.

ಅದರಂತೆ ಈ ಪತ್ರದೊಂದಿಗೆ ರಾಜ್ಯ ಮುಖ್ಯ ಆಯುಕ್ತರು ಕಳುಹಿಸಿರುವ ಪತ್ರವನ್ನು ಲಗತ್ತಿಸಲಾಗಿದೆ. ಕಾಲೇಜ್ ಹಾಗೂ ವಿಶ್ವವಿದ್ಯಾಲಯದಲ್ಲಿ ರೋವರ್-ರೇಂಜರ್ ಘಟಕವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
19/10/2020
ಕುಲಸಚಿವರು

ಅಡಕ: ಮೇಲೆ ತಿಳಿಸಿರುವಂತೆ.

13


# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91–80–2226 0017; (ಗೈಡ್ ವಿಭಾಗ) +91–80–2226 7470; ಫ್ಯಾಕ್ಸ್: +91–80–2226 1047

ಮಿಂಚಂಚೆ: shq@bsgkarnataka.org / shanthigruha@scout.org.in ಅಂತರ್ಜಾಲ: www.bsgkarnataka.org


150 YEARS OF CELEBRATING THE MAHATMA

ಸಂಖ್ಯೆ:ಬಿಎಸ್‌ಜಿ:ಎಸ್‌ಹೆಚ್‌ಕ್ಯೂ: 534 :2020–21 ದಿನಾಂಕ: 02.09.2020

ಮಾನ್ಯರೆ,

ವಿಷಯ:– ಮಾನ್ಯ ಉಪಕುಲಪತಿಗಳ ಸಭೆಯಲ್ಲಿ ಚರ್ಚಿಸಿದ ಅಂಶಗಳ ಕುರಿತು.

******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ದಿನಾಂಕ:30.07.2020ರಂದು ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳ ಸಭೆಯನ್ನು ವರ್ಚ್ಯುಯಲ್ ಮುಖಾಂತರ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ತಾವುಗಳು ಸಕ್ರಿಯವಾಗಿ ಭಾಗವಹಿಸಿ ಉತ್ತಮ ಸಲಹೆ, ಸೂಚನೆಗಳನ್ನು ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಉಪಕುಲಪತಿಗಳು ಮಾತನಾಡಿ ಕೋವಿಡ್–19ರ ಸಂದರ್ಭದಲ್ಲಿ ರೋವರ್ಸ್-ರೇಂಜರ್ಸ್ ಮತ್ತು ಶಿಕ್ಷಕರುಗಳು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿರುತ್ತಾರೆ, ಯುವಕರನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದ್ದು, ಮೌಲ್ಯಯುತ ಶಿಕ್ಷಣಕ್ಕೆ ಹೆಚ್ಚು ಹೊತ್ತು ನೀಡಬೇಕಾಗಿದ್ದು, ಯುವಕರಿಗೆ ಉತ್ತಮ ಸಂವಾದದ ಮೂಲಕ ಮೌಲ್ಯಯುತ ಶಿಕ್ಷಣದ ಅರಿವನ್ನು ಉಂಟುಮಾಡಬೇಕಾಗಿದೆ, ಪಠ್ಯ ವಿಷಯದ ಜೊತೆಗೆ ಸ್ಕೌಟ್–ಗೈಡ್ ಶಿಕ್ಷಣ ಪ್ರಜ್ಞಾಪೂರ್ವಕವಾದ ಯೋಚನೆ ಇದಕ್ಕಾಗಿ ಹೆಚ್ಚಿನ ಪ್ರೋತ್ಸಾಹ ನೀಡಬೇಕಾಗಿದೆ. ವಿಶ್ವವಿದ್ಯಾನಿಲಯಗಳ ಹಂತದಲ್ಲಿ ಹೆಚ್ಚು ದಳಗಳನ್ನು ತೆರೆದು ಯುವ ಜನತೆಗೆ ರೋವರ್–ರೇಂಜರ್ ಕೌಶಲ್ಯವನ್ನು ಸದುಪಯೋಗ ಪಡೆದುಕೊಳ್ಳುವಂತೆ ಮಾಡಬೇಕಾಗಿದೆ. ಈ ಕೂಡಲೇ ಡೀನ್ ಸಭೆಯಲ್ಲಿ ಅಂಗೀಕರಿಸಿ ಎಲ್ಲಾ ಕಾಲೇಜುಗಳಲ್ಲಿ ರೋವರ್–ರೇಂಜರ್ ಘಟಕಗಳನ್ನು ಪ್ರಾರಂಭಿಸುವುದಾಗಿ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಉಪಕುಲಪತಿಗಳು ಈ ಎಲ್ಲಾ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ.

**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಪಕುಲಪತಿಗಳಲ್ಲಿ ವಿನಂತಿಸಿದ ಅಂಶಗಳು:**

- ದಾವಣಗೆರೆ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳ ರೀತಿಯಲ್ಲಿ ಉಳಿದ ಎಲ್ಲಾ ವಿಶ್ವವಿದ್ಯಾನಿಲಗಳಲ್ಲೂ ಉನ್ನತ ಶಿಕ್ಷಣದಲ್ಲಿ ರೋವರ್ಸ್–ರೇಂಜರ್ಸ್‌ಗಳಿಗೆ ಸೀಟು ಕಾಯ್ದಿರಿಸುವುದು.
- ಪ್ರತಿ ವಿಶ್ವವಿದ್ಯಾನಿಲಯಗಳಲ್ಲಿ ಇಬ್ಬರು ಸಂಯೋಜಕರುಗಳನ್ನು (ಪುರುಷರು & ಮಹಿಳೆ ಉಪನ್ಯಾಸಕರು) ನಿಯೋಜಿಸುವುದು.
- ರೋವರ್–ರೇಂಜರ್ ನಿಧಿಯಿಂದ ಸಂಗ್ರಹಿಸಿದ ರೂ.50/–ಗಳ ಹಣವನ್ನು ಚಟುವಟಿಕೆಗಳನ್ನು ನಡೆಸಲು, ಸಮವಸ್ತ್ರ, ಪುಸ್ತಕ ಖರೀದಿ, ಸ್ಕೌಟ್–ಗೈಡ್ ಸಲಕರಣೆ ಕೊಳ್ಳುವುದು, ಧ್ವಜ ಖರೀದಿ ಮುಂತಾದವುಗಳ ಬಳಕೆಗೆ ಅನುಮತಿಯನ್ನು ಕೋರಲಾಯಿತು.

Admission
KP 10/9/2020

BCU - 95
8/9/2020

RPT-4394
10/9/2020

Manu
14/9/2020

Registrar for necessary action
9/9

* ಸೆಪ್ಟೆಂಬರ್ ಮಾಹೆಯಲ್ಲಿ ನಡೆಸುವ ಬಿಗಿನರ್ಸ್ ಕೋರ್ಸ್ ಆನ್‌ಲೈನ್ ತರಬೇತಿಗೆ ಪ್ರತಿ ಕಾಲೇಜುಗಳಿಂದ ಇಬ್ಬರು Programme Officer ಅಥವಾ ದಳನಾಯಕರು ನಿಯೋಜಿಸಲು ಕೋರಲಾಯಿತು.
* ಮೂರು ವರ್ಷಗಳಿಗೊಮ್ಮೆ ರೋವರ್-ರೇಂಜರ್ Programme Officer ಅಥವಾ ಉಪನ್ಯಾಸಕರನ್ನು ಬದಲಾಯಿಸಬಾರದು. ಕಾರಣ ತರಬೇತಿಯನ್ನು ಪಡೆದು ಘಟಕವನ್ನು ನಡೆಸಲು ತೊಂದರೆಯಾಗುತ್ತದೆ. ಆದ ಕಾರಣ ಉಪನ್ಯಾಸಕರನ್ನು ಬದಲಾವಣೆ ಮಾಡಬಾರದೆಂದು ವಿನಂತಿಸಲಾಯಿತು.
* ಮಾನ್ಯ ಶ್ರೀ. ವೆಂಕಯ್ಯ ನಾಯ್ಡು, ಉಪರಾಷ್ಟ್ರಪತಿಗಳು, ಭಾರತ ಸರ್ಕಾರ ಇವರು ಸ್ಕೌಟ್-ಗೈಡ್ ಕಾರ್ಯಕ್ರಮಕ್ಕೆ ಬಂದಾಗ ಎಲ್ಲಾ ಕಾಲೇಜುಗಳಲ್ಲಿ ಎನ್.ಎಸ್.ಎಸ್, ಎನ್.ಸಿ.ಸಿ ಅಥವಾ ಸ್ಕೌಟ್-ಗೈಡ್ ಕಡ್ಡಾಯವಾಗಿ ಇರಬೇಕು, ಯುವಕರು ಯಾವುದಾದರು ಒಂದರಲ್ಲಿ ಇದ್ದರೆ ಮಾತ್ರ ಪದವಿಯನ್ನು ನೀಡಬೇಕು ಎಂದು ತಿಳಿಸಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ರೋವರ್-ರೇಂಜರ್ ಘಟಕವನ್ನು ತೆರೆದು ಯುವಕರಲ್ಲಿ ದೇಶಭಕ್ತಿ, ಕೌಶಲ್ಯಗಳ ತರಬೇತಿ, ಮಾನವೀಯ ಮೌಲ್ಯ ಮತ್ತು ಜೀವನ ಶಿಕ್ಷಣ ನೀಡುವ ಮತ್ತು ವಿವಿಧ ರಚನಾತ್ಮಕ ಕಾರ್ಯಕ್ರಗಳನ್ನು ನಡೆಸುತ್ತಿರುವ ಸ್ಕೌಟ್-ಗೈಡ್ ಸಂಸ್ಥೆಗೆ ತಾವು ಸಂಪೂರ್ಣ ಸಹಕಾರ ನೀಡುವುದಾಗಿ ಮತ್ತು ಎಲ್ಲಾ ಕಾಲೇಜುಗಳಲ್ಲಿ ಘಟಕ ಪ್ರಾರಂಭಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದ್ದಕ್ಕೆ ತಮ್ಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಮಾನ್ಯ ಉಪಕುಲಪತಿಗಳು

ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ

ಕರ್ನಾಟಕ